np newz www.npnewz.com Contact@npnewz.com 8951054014, 7483168889

# ಎನ್ ಪಿ ನ್ಯೂಸ್

ಇದು ಭರವಸೆಯ ಬೆಳಕು

NP NEWS

ಬುಧವಾರ 10 ಡಿಸೆಂಬರ್ 2025 • ಸಂಪುಟ 02 • ಸಂಚಿಕೆ 02 • ಪುಟ 01 • ಪ್ರಧಾನ ಸಂಪಾದಕರು: ವಾಸುದೇವ ಭಟ್ ನೆಕ್ಕರಪಲ್ಕೆ

# ಅಧೋಗತಿಗೆ ತಲುಪಿದ ಹಿರಿಯಡ್ಕ ರಸ್ತೆ !!

## ಕಣ್ಣು ಮುಚ್ಚಿ ಕುಳಿತ ಲೋಕೋಪಯೋಗಿ ಇಲಾಖೆ ಮತ್ತು ಅಧಿಕಾರಿಗಳು

**ಹಿರಿಯಡ್ಕ:** ಹಿರಿಯಡ್ಕ ಪೇಟೆಯಿಂದ ಕಾರ್ಕಳ ಸಂಪರ್ಕಿಸುವ ಸುಮಾರು 300 ಮೀಟರ್ ನಷ್ಟು ರಸ್ತೆ ಸಂಪೂರ್ಣ ಹದಗೆಟ್ಟು ವರ್ಷ ಕಳೆದರೂ ದುರಸ್ತಿಯಾಗಲಿ ನೂತನ ನಿರ್ಮಾಣ ಭಾಗ್ಯವಾಗಲಿ ಇನ್ನೂ ಒದಗಿ ಬಂದಿಲ್ಲ. ಹಲವಾರು ಅವಘಡಗಳು, ಅಪಘಾತಗಳು ನಡೆದು ಜನರಿಗೆ ಸಂಚರಿಸಲು ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಮೀಪದಲ್ಲೇ ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಪ್ರಾಥಮಿಕ ಶಾಲೆ ಇದ್ದು ಈ ರಸ್ತೆಯ ವಿಪರೀತ ಧೂಳಿನಿಂದ ಶಾಲೆಯ ಮಕ್ಕಳಿಗೂ ತೀರಾ ತೊಂದರೆಯಾಗಿದ್ದು ಹಲವಾರು ಆರೋಗ್ಯ ಸಮಸ್ಯೆಗಳು ಉಂಟಾಗಿವೆ. ಈ ವಿಷಯಕ್ಕೆ ಸಂಬಂಧ ಪಟ್ಟಂತೆ ಹಲವಾರು ಸಾರ್ವಜನಿಕ ದೂರುಗಳು ದಾಖಲಾದರೂ ಕೂಡ ಸ್ಥಳೀಯ ಪಂಚಾಯತ್, ಲೋಕೋಪಯೋಗಿ ಇಲಾಖೆ, ಆಡಳಿತಾಧಿಕಾರಿಗಳು, ಶಾಸಕರು ಯಾರಿಂದಲೂ ಸಮಸ್ಯೆ ಬಗೆಹರಿಯಲಾದಂತಹ ಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆಯು ಸಂಪೂರ್ಣ ಲೋಕೋಪಯೋಗಿ ಇಲಾಖೆಗೆ ಒಳಪಟ್ಟಿದ್ದು ಇಷ್ಟು ಸಮಯ ಕಳೆದರೂ, ಜನರು ಹೇಳತೀರದ ಸಂಕಷ್ಟವನ್ನು ಅನುಭವಿಸಿದರೂ ಕೂಡ ಇಲಾಖೆಯ ಅಧಿಕಾರಿಗಳು ಇನ್ನೂ ಎಚ್ಚೆತ್ತುಕೊಂಡಿಲ್ಲ. ಹರಸಾಹಸ ಪಟ್ಟುಕೊಂಡು ಜನರು ವಾಹನಗಳಲ್ಲಿ ಸಂಚರಿಸುವ ಸಂಕಷ್ಟ ಹೇಳತೀರದು. ಇನ್ನಾದರೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ರಸ್ತೆ ದುರಸ್ತಿಯನ್ನು ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರ ಹಿತಾಸಕ್ತಿಯಿಂದ ಎನ್.ಪಿ ನ್ಯೂಸ್ ಈ ಸುದ್ದಿಯನ್ನು ಪ್ರಕಟಿಸಿದೆ.

**ವರದಿ: ಎನ್ ಪಿ ನ್ಯೂಸ್** ಇದು ಭರವಸೆಯ ಬೆಳಕು








ಹಿರಿಯಡ್ಕ ರಸ್ತೆ ಸಮಸ್ಯೆಯು ನನ್ನ ಗಮನದಲಿದ್ದು, ಪಂಚಾಯತ್‌ನ ಮನವಿ ಹಾಗೂ ಸಾರ್ವಜನಿಕರ ದೂರಿನನ್ವಯ ಮಾನ್ಯ ಲೋಕೋಪಯೋಗಿ ಇಲಾಖೆಯ ಗಮನಕ್ಕೆ ತಂದಿದ್ದು ಸರ್ಕಾರದ ಅನುದಾನದ ಕೊರತೆಯಿಂದಾಗಿ ರಸ್ತೆ ದುರಸ್ತಿಯು ವಿಳಂಬವಾಗುತ್ತಿದೆ, ಈ ಬಗ್ಗೆ ಕೂಡಲೇ ಅಧಿಕಾರಿಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

• ಗುರ್ಮೆ ಸುರೇಶ್ ಶೆಟ್ಟಿ
ಶಾಸಕರು ಕಾಪು ವಿಧಾನ ಸಭಾ ಕ್ಷೇತ್ರ



ಲೋಕೋಪಯೋಗಿ ಇಲಾಖೆಗೆ ಗ್ರಾಮ ಪಂಚಾಯತ್ ವತಿಯಿಂದ ಸಾರ್ವಜನಿಕರ ದೂರಿನಡಿಯಲ್ಲಿ ಈ ರಸ್ತೆಯ ಬಗ್ಗೆ ಹಲವಾರು ಸಲ ಮನವಿ ನೀಡಿದ್ದರೂ ಕೂಡ ಇಲಾಖೆಯಿಂದ ಯಾವುದೇ ರೀತಿಯ ಸಮರ್ಪಕವಾದ ಉತ್ತರ ಈವರೆಗೂ ದೊರೆತಿಲ್ಲ.

• ಹರೀಶ್ ಸಾಲಿಯಾನ್
ಉಪಾಧ್ಯಕ್ಷರು ಗ್ರಾಮ ಪಂಚಾಯತ್




## ಆನಂದತೀರ್ಥ ವಿದ್ಯಾಲಯದಲ್ಲಿ

**ಭಗವದ್ಗೀತೆ ಸಾಮೂಹಿಕ ಕಂಠಪಾಠ ಪಠಣದ ವಿಶ್ವ ದಾಖಲೆ**



**ಕುಂಜಾರುಗಿರಿ:** ಆನಂದತೀರ್ಥ ವಿದ್ಯಾಲಯ ಪಾಜಕ, ಕುಂಜಾರುಗಿರಿ ಇಲ್ಲಿ ಆಯೋಜಿಸಿದ್ದ **"ಆನಂದಗೀತೋತ್ಸವ 2025-26"** ಕಾರ್ಯಕ್ರಮದಲ್ಲಿ, 4039 ಮಂದಿ ಒಂದೇ ಕಂಠದಲ್ಲಿ ಶ್ರೀಮದ್ ಭಗವದ್ಗೀತೆ 15ನೇ ಅಧ್ಯಾಯ ಪುರುಷೋತ್ತಮ ಯೋಗದ ಸಾಮೂಹಿಕ ಕಂಠಪಾಠ ಮಾಡಿ ವಿಶ್ವದಾಖಲೆ ನಿರ್ಮಿಸಿದ್ದಾರೆ. ಈ ಅದ್ಭುತ ಸಾಧನೆಯು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ನಲ್ಲಿ ಸ್ಥಾನ ಪಡೆದುಕೊಂಡಿತು. ಡಿಸೆಂಬರ್ 07, 2025 ಭಾನುವಾರ ಮಧ್ಯಾಹ್ನ 3.00ಕ್ಕೆ ಶ್ರೀ ವಿಶ್ವೇಶತೀರ್ಥ ಮಂಟಪದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿಗಳು ಮತ್ತು ಪೋಷಕರು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಅದಮಾರು ಮಠದ ಶ್ರೀ ಶ್ರೀ ಶ್ರೀ **ವಿಶ್ವಪ್ರಿಯತೀರ್ಥ ಸ್ವಾಮೀಜಿ** ಅವರು ಕಾರ್ಯಕ್ರಮಕ್ಕೆ ಆಶೀರ್ವಚನ ನೀಡಿದರು.

## 'ವಂದೇ ಮಾತರಂ' ವಿಭಜಿಸಿದ್ದು ನೆಹರೂ, ಕಾಂಗ್ರೆಸ್ ಮೋದಿ ತೀವ್ರ ವಾಗ್ದಾಳಿ



**ನವದೆಹಲಿ:** ಸಂಸತ್ತಿನಲ್ಲಿ **'ವಂದೇ ಮಾತರಂ'** ಗೀತೆಯ 150ನೇ ವಾರ್ಷಿಕೋತ್ಸವದ ಚರ್ಚೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಮತ್ತು ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಪ್ರಧಾನಿ ಮೋದಿ, "1937ರಲ್ಲಿ ಮುಸ್ಲಿಂ ಲೀಗ್‌ನ ವಿರೋಧಕ್ಕೆ ಮಣಿದು, ನೆಹರೂ ಅವರ ಬೆಂಬಲದೊಂದಿಗೆ ಕಾಂಗ್ರೆಸ್ ಪಕ್ಷವು **'ವಂದೇ ಮಾತರಂ'** ಗೀತೆಯ ಪ್ರಮುಖ ಭಾಗಗಳನ್ನು ತೆಗೆದುಹಾಕುವ ಮೂಲಕ ಅದನ್ನು **'ತುಕ್ಡೆ-ತುಕ್ಡೆ'** ಮಾಡಿತು. ಈ ಮೂಲಕ ಅವರು ದೇಶದ ಭಾವನೆಗೆ ದ್ರೋಹ ಬಗೆದರು," ಎಂದು ಆರೋಪಿಸಿದರು. ಈ ನಿರ್ಧಾರವು ವಿಭಜನೆಯ ಬೀಜವನ್ನು ಬಿತ್ತಿತು ಎಂದೂ ಅವರು ಟೀಕಿಸಿದರು. ಮೋದಿ ಅವರು 1975ರ ತುರ್ತು ಪರಿಸ್ಥಿತಿಯನ್ನೂ ಪ್ರಸ್ತಾಪಿಸಿ, ಕಾಂಗ್ರೆಸ್ ಇಂದಿಗೂ **'ತುಕ್ಡೆ-ತುಕ್ಡೆ'** ಮನಸ್ಥಿತಿಯಲ್ಲಿದೆ ಎಂದು ದೂರಿದರು. ಪ್ರಧಾನಿಯವರ ಈ ಆರೋಪಗಳನ್ನು ಕಾಂಗ್ರೆಸ್ ಪಕ್ಷ ತೀವ್ರವಾಗಿ ಖಂಡಿಸಿದ್ದು, ಇದು ಇತಿಹಾಸವನ್ನು ತಿರುಚುವ ಪ್ರಯತ್ನ ಎಂದು ತಿರುಗೇಟು ನೀಡಿದೆ. 'ವಂದೇ ಮಾತರಂ'ಗೆ ಮಹತ್ವ ನೀಡಿದ್ದು ಕಾಂಗ್ರೆಸ್ ಎಂದು ನಾಯಕರು ಪ್ರತಿವಾದಿಸಿದರು.

## ಡಾ. ಉಪಾಧ್ಯಾಯ ಮೂಡುಬೆಳ್ಳೆ ಅವರಿಂದ ಪುತ್ತಿಗೆ ಸ್ವಾಮೀಜಿಯವರಿಗೆ 'ಏಕ-ರೇಖಾ ಕಲೆ'ಯ ಗೌರವ



ರಾಷ್ಟ್ರಪ್ರಶಸ್ತಿ ಪುರಸ್ಕೃತ ಚಿತ್ರಕಲಾವಿದ **ಡಾ. ಉಪಾಧ್ಯಾಯ ಮೂಡುಬೆಳ್ಳೆಯವರು** ಭಾನುವಾರ ರಾಜಾಂಗಣದಲ್ಲಿ ನಡೆದ ವಿಶ್ವಗೀತಾ ಸಮಾರೋಪ ಸಮಾರಂಭದಲ್ಲಿ **ಪುತ್ತಿಗೆ ಮಠದ ಶ್ರೀಗಳಿಗೆ** ವಿಶಿಷ್ಟ ಚಿತ್ರಗಳನ್ನು ಸಮರ್ಪಿಸಿ ಗೌರವ ಸಲ್ಲಿಸಿದರು. ಇವರು ಒಂದೇ ಗೆರೆಯಲ್ಲಿ **(ಏಕರೇಖಾ)** ರಚಿಸಿರುವ ಈ ಚಿತ್ರಗಳು ಸಮಾರಂಭದ ಪ್ರಮುಖ ಆಕರ್ಷಣೆಯಾಗಿದ್ದವು. ಇತ್ತೀಚೆಗೆ ಉಡುಪಿಗೆ ಆಗಮಿಸಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿಜಿ ಮತ್ತು ಪುತ್ತಿಗೆ ಶ್ರೀಗಳವರು ಪರಸ್ಪರ ಮುಗುಳ್ನಗೆ ಬೀರುತ್ತಿರುವ ಮಧುರ ಕ್ಷಣವನ್ನು ಒಂದು ಚಿತ್ರವು ಸೆರೆಹಿಡಿದಿದೆ. ಮತ್ತೊಂದು ಚಿತ್ರವು **ವಿಶ್ವಗೀತಾ ಲೇಖನದ ಸ್ವರೂಪವನ್ನು** ಒಳಗೊಂಡಿದೆ. ಇದರಲ್ಲಿ ಶ್ರೀಪಾದರು ಗೀತಾ ಲೇಖನದ ಪುಸ್ತಕಗಳನ್ನು, ಹಾಗೂ ಶ್ರೀ ಕೃಷ್ಣನನ್ನು ರಥದಲ್ಲಿ ಕುಳ್ಳಿರಿಸಿ ವಿಶ್ವ ಪರ್ಯಟನೆ ಮಾಡುತ್ತಿರುವ ಅದ್ಭುತ ದೃಶ್ಯವನ್ನು ಏಕರೇಖಾ ಶೈಲಿಯಲ್ಲಿ ಚಿತ್ರಿಸಲಾಗಿದೆ.

## ಕಾಪು ಕ್ಷೇತ್ರದ ಅಭಿವೃದ್ಧಿಗೆ ಶಾಸಕರಿಂದ ವಿಧಾನಸಭೆಯ ಅಧಿವೇಶನದಲ್ಲಿ ಮನವಿ



ಕಾಪು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಗುರ್ಮೆ ಸುರೇಶ್ ಶೆಟ್ಟಿ ಅವರು ಇತ್ತೀಚೆಗೆ ನಡೆದ ವಿಧಾನಮಂಡಲದ ಅಧಿವೇಶನದ ಸಂದರ್ಭದಲ್ಲಿ ತಮ್ಮ ಕ್ಷೇತ್ರದ ಸಮಗ್ರ ಪ್ರಗತಿ ಮತ್ತು ಪ್ರವಾಸೋದ್ಯಮದ ಉತ್ತೇಜನಕ್ಕಾಗಿ ರಾಜ್ಯ ಸರ್ಕಾರಕ್ಕೆ ಮಹತ್ವದ ಮನವಿಯನ್ನು ಸಲ್ಲಿಸಿದ್ದಾರೆ. ಅವರು ತಮ್ಮ ಕಾಪು ಕ್ಷೇತ್ರದ ಪ್ರಮುಖ ಪ್ರವಾಸಿ ತಾಣಗಳಾದ ಕಡಲತೀರಗಳು ಮತ್ತು ಇತರೆ ಐತಿಹಾಸಿಕ ಸ್ಥಳಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ ಹಾಗೂ ಕ್ಷೇತ್ರದ ಸರ್ವಾಂಗೀಣ ಪ್ರಗತಿಗಾಗಿ ವಿಶೇಷ ಅನುದಾನವನ್ನು ಒದಗಿಸುವಂತೆ ಒತ್ತಾಯಿಸಿದ್ದಾರೆ. ಈ ವೃತ್ತಿಪರ ಮನವಿಯು ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ನೀಡಿ, ಕ್ಷೇತ್ರವನ್ನು ಮಾದರಿ ಪ್ರವಾಸಿ ತಾಣವಾಗಿ ರೂಪಿಸುವ ದೂರದೃಷ್ಟಿಯನ್ನು ಒಳಗೊಂಡಿದೆ. ಶಾಸಕರು ಅಧಿವೇಶನದಲ್ಲಿ ಈ ಬೇಡಿಕೆಯನ್ನು ಪ್ರಬಲವಾಗಿ ಮಂಡಿಸಿದ್ದು, ಸರ್ಕಾರವು ಈ ಮಂಡನೆಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆ.

## ಪಂಚನಬೆಟ್ಟುವಿನಲ್ಲಿ 'ಪ್ಲಾಸ್ಟಿಕ್ ಮುಕ್ತ ಜಾಥ'ದ ಮೂಲಕ ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ

ಸಾರ್ವಜನಿಕ ಗಣೇಶೋತ್ಸವ ಸಮಿತಿ ಪಂಚನಬೆಟ್ಟು-2025ರ ನೇತೃತ್ವದಲ್ಲಿ 07/12/2025 ರಂದು ಸ್ವಚ್ಛ ಭಾರತ ಅಭಿಯಾನದಡಿ **'ಪ್ಲಾಸ್ಟಿಕ್ ಮುಕ್ತ ಜಾಥ'** ಕಾರ್ಯಕ್ರಮ ಯಶಸ್ವಿಯಾಯಿತು. ಬೊಮ್ಮಾರಬೆಟ್ಟು ಗರಡಿಯಿಂದ ಗುಡ್ಡೆಯಂಗಡಿ ಕ್ರಾಸ್ ತನಕ ರಸ್ತೆಯಲ್ಲಿ ನಡೆದ ಈ ಸ್ವಚ್ಛತಾ ಕಾರ್ಯವನ್ನು ಸಮಿತಿಯ ಮಾರ್ಗದರ್ಶಕರಾದ ಎಮ್.ವಿಶ್ವನಾಥ ರೈ ಕೊಡಿಬೆಟ್ಟು ಉದ್ಘಾಟಿಸಿ, "ಊರಿನ ಸ್ವಚ್ಛತೆಯ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣದ ಸಂದೇಶ ನೀಡಿದರು. ಪ್ರಧಾನ ಅರ್ಚಕ ವಾಸುದೇವ ಭಟ್ ನೆಕ್ಕರಪಲ್ಕೆ ಮಾತನಾಡಿ, 25ನೇ ವರ್ಷದ ರಜತ ಸಂಭ್ರಮದ ಅಂಗವಾಗಿ ನಡೆದ ಈ ಕಾರ್ಯಕ್ರಮದಿಂದ ಗ್ರಾಮವು ಪ್ಲಾಸ್ಟಿಕ್ ಮುಕ್ತ ವಲಯವಾಗಲು ಮಾದರಿಯಾಗಿದೆ ಎಂದು ಸಮಿತಿಯನ್ನು ಅಭಿನಂದಿಸಿದರು. ಸಮಿತಿಯ ಪದಾಧಿಕಾರಿಗಳು, ಬೊಮ್ಮಾರಬೆಟ್ಟು ಗ್ರಾ.ಪಂ. ಸದಸ್ಯ ರಾಕೇಶ್, ಶ್ರೀರಾಮ ಭಜನಾ ಮಂಡಳಿ, ಸ್ತ್ರೀಶಕ್ತಿ ಸಂಘ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಭಸ್ಮೇಶ್ವರಿ ಮರಾಠಿ ಸಂಘ, ಸಹಾಯ ಹಸ್ತ (ರಿ) ಮುಂಡುಜೆ ಸದಸ್ಯರು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು. ಎಮ್.ವಿಶ್ವನಾಥ ರೈ ಕೊಡಿಬೆಟ್ಟು ಇವರು ಗ್ಲೌಸ್, ಮಾಸ್ಕ್, ಚೀಲ ಮತ್ತು ಉಪಹಾರ ಒದಗಿಸಿದರೆ, ಬಿ.ಎಮ್ ಶೇಖರ್‌ಸಹಾಯ ಹಸ್ತ (ರಿ) ಮುಂಡುಜೆ, ಶ್ರೀನಾಥ ನಾಯಕ್ ಮತ್ತು ಸತೀಶ್ ನಾಯ್ಕ ತಂಪು ಪಾನೀಯ ನೀಡಿ ಸಹಕರಿಸಿದರು. ಪ್ರತಾಪ್ ನಾಯ್ಕ್ ವಾಹನ ವ್ಯವಸ್ಥೆ ಮಾಡಿದರು.



### ಸ್ವಚ್ಛ ಭಾರತ ಅಭಿಯಾನದಡಿ ಪ್ಲಾಸ್ಟಿಕ್ ಮುಕ್ತ ಜಾಥ

ಸಾರ್ವಜನಿಕ ಗಣೇಶೋತ್ಸವ ಸಮಿತಿ ಪಂಚನಬೆಟ್ಟು-2025ರ ನೇತೃತ್ವದಲ್ಲಿ, 07/12/2025ರಂದು 'ಸ್ವಚ್ಛ ಭಾರತ ಅಭಿಯಾನ'ದಡಿ ಮಹತ್ವದ "ಪ್ಲಾಸ್ಟಿಕ್ ಮುಕ್ತ ಜಾಥ"ವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮವು ಬೊಮ್ಮಾರಬೆಟ್ಟು ಗರಡಿಯಿಂದ ಗುಡ್ಡೆಯಂಗಡಿ ಕ್ರಾಸ್ ತನಕ ನಡೆಯಿತು. ಊರಿನ ಹಿರಿಯರು ಮತ್ತು ಸಮಿತಿಯ ಮಾರ್ಗದರ್ಶಕರಾದ ಎಮ್. ವಿಶ್ವನಾಥ ರೈ ಕೊಡಿಬೆಟ್ಟುರವರು ಉದ್ಘಾಟಿಸಿ, ಊರಿನ ಸ್ವಚ್ಛತೆಯು ನಮ್ಮ ಮನೆಯ ಸ್ವಚ್ಛತೆಯಷ್ಟೇ ಮುಖ್ಯವಾಗಿದ್ದು, ಆರೋಗ್ಯಕರ ಸಮಾಜಕ್ಕೆ ಕಾರಣವಾಗುತ್ತದೆ ಎಂಬ ಸಂದೇಶವನ್ನು ನೀಡಿದರು.

## ಹಾಸನದಲ್ಲಿ ಯುವಕನ ಬರ್ಬರ ಹತ್ಯೆ: ಆರೋಪಿಗಳಿಂದ ವಿಕೃತ ವಿಡಿಯೋ ವೈರಲ್, ಪೊಲೀಸರಿಂದ ತೀವ್ರ ಶೋಧ






ಹಾಸನ ತಾಲೂಕಿನ ಬಿಟ್ಟಗೌಡನಹಳ್ಳಿ ಬಳಿ ನಡೆದ 21 ವರ್ಷದ ಯುವಕನ ಹತ್ಯೆ ಪ್ರಕರಣವು ರಾಜ್ಯದಲ್ಲಿ ತೀವ್ರ ಸಂಚಲನ ಮೂಡಿಸಿದೆ. ಡಿಸೆಂಬರ್ 9 ರಂದು ಬೆಳಕಿಗೆ ಬಂದ ಈ ಘಟನೆಯಲ್ಲಿ ಮೃತರನ್ನು ಹೂವಿನಹಳ್ಳಿ ಗ್ರಾಮದ ನಿವಾಸಿ ಕೀರ್ತಿ ಎಂದು ಗುರುತಿಸಲಾಗಿದೆ. ಈ ಕೊಲೆಗಿಂತಲೂ, ಆರೋಪಿಗಳು ಕೃತ್ಯದ ಬಳಿಕ ಮೃತದೇಹದೊಂದಿಗೆ ಸೆಲ್ಫಿ ವಿಡಿಯೋ ಚಿತ್ರೀಕರಿಸಿ, "ನಾವು ಇವನನ್ನು ಕೊಲೆ ಮಾಡಿದ್ದೇವೆ, ನಾವೇ ದೊಡ್ಡವರಾದೆವು" ಎಂದು ಹೇಳಿಕೆ ನೀಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವುದು ನಾಗರಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಡಿಸೆಂಬರ್ 8 ರ ಸಂಜೆ ಕೀರ್ತಿ ತನ್ನ ಸ್ನೇಹಿತರೊಂದಿಗೆ ಪಾರ್ಟಿಯಲ್ಲಿದ್ದಾಗ, ಗಾಂಜಾ ಅಮಲಿನಲ್ಲಿದ್ದ ಮೂವರು ಸ್ನೇಹಿತರು ಈ ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಶಂಕಿಸಿದ್ದಾರೆ. ವೈರಲ್ ಆದ ವಿಕೃತ ವಿಡಿಯೋವೇ ಪೊಲೀಸರಿಗೆ ಮೃತದೇಹದ ಸುಳಿವು ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಮೃತನ ಸಹೋದರ ಕಿರಣ್ ನೀಡಿರುವ ದೂರಿನ ಆಧಾರದ ಮೇಲೆ, ಹಾಸನ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಮುಖ ಆರೋಪಿ ಉಲ್ಲಾಸ್ ಸೇರಿದಂತೆ ಇತರ ಸ್ನೇಹಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (BNS), 2023 ರ ವಿವಿಧ ಸೆಕ್ಷನ್‌ಗಳು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ, 1989 ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಸದ್ಯ, ಪೊಲೀಸರು ಆರೋಪಿಗಳನ್ನು ಬಂಧಿಸಲು ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ.

NP NEWS ನೇರಪ್ರಸಾರ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ 7483168889 89510 54014